

# ಮಹಾತಾಯಿ!

ಜರ್ಮನಿಯ ರಮೋನಾ ವೆಗೆಮನ್‌ಳಿಗೆ ತನ್ನ ಸಾಕುನಾಯಿಯು ಎರಡನೇ ಪ್ರಸವದಲ್ಲಿ, ಒಂದೇ ಸಲಕ್ಕೆ ಹದಿನೇಳು ಮರಿಗಳನ್ನು ಹಾಕಿದಾಗ ಆಶ್ಚರ್ಯವೋ ಆಶ್ಚರ್ಯ. 'ಎಟನಾ' ಎಂಬ ಹೆಸರಿನ ಈ ರೊಡೇಶಿಯನ್ ರಿಡ್ಜ್‌ಬ್ಯಾಕ್ ತಳಿಯು, ಕಳೆದ ಸೆಪ್ಟೆಂಬರ್‌ನಲ್ಲಿ 9 ಗಂಡು ಹಾಗೂ 8 ಹೆಣ್ಣು ಮರಿಗಳಿಗೆ ಜನ್ಮ ನೀಡಿದ್ದು ಹೊಸ ದಾಖಲೆ.

ಸುಮಾರು 26 ಗಂಟೆಗಳ ಪ್ರಸವ ಕಾಲದಲ್ಲಿ ಸ್ವಾಭಾವಿಕವಾಗಿಯೇ ಜನಿಸಿದ ಈ ಮರಿಗಳೆಲ್ಲವೂ ಆರೋಗ್ಯವಾಗಿವೆ. ಆದರೆ ಮಹಾತಾಯಿ ಎಟನಾಳಿಗೆ ಅಷ್ಟೊಂದು ಮರಿಗಳಿಗೆಲ್ಲಾ ಸಮರ್ಪಕವಾಗಿ ಹಾಲೂಡಿಸಲು ಸಾಧ್ಯವಾಗದ ಕಾರಣ, ಮೊದಲ ನಾಲ್ಕು ವಾರಗಳ ಕಾಲ ಬಾಣಂತಿ ಹಾಗೂ ಮರಿಗಳ ಆರೈಕೆ ಮಾಡುವುದು ರಮೋನಾ ವೆಗೆಮನ್ನ್ ದಂಪತಿಗೆ ಸಾಕುಸಾಕಾಯಿತಂತೆ. ರೊಡೇಶಿಯನ್ ರಿಡ್ಜ್‌ಬ್ಯಾಕ್ ಆಫ್ರಿಕನ್ ತಳಿಯಾಗಿದ್ದರಿಂದ ಈ ನಾಯಿಮರಿಗಳಿಗೆಲ್ಲಾ 'ಬಿ' ಅಕ್ಷರದಿಂದ ಪ್ರಾರಂಭವಾಗುವ ಆಫ್ರಿಕನ್ ಹೆಸರುಗಳನ್ನೇ ಇಟ್ಟಿದ್ದಾರಂತೆ. ಅಂದ ಹಾಗೆ 'ಎಟನಾ'ಳು ತನ್ನ ಮೊದಲ ಪ್ರಸವದಲ್ಲಿ ಬರೀ ಎಂಟು ಮರಿಗಳಿಗೆ ಜನ್ಮ ನೀಡಿದ್ದಳಂತೆ!

■ ವಿದ್ಯಾ ಹಾಲಭಾವಿ

